ರಾಜ್ಯದಲ್ಲಿ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ

1883(2284): ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬರದ ಹಿನ್ನೆಲೆಯಲ್ಲಿ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆಯೇ; ಮನ್ನಾ ಮಾಡಿರುವ ಬಡ್ಡಿಯ ಮೊತ್ತ ಎಷ್ಟು?

ಆ. ಮನ್ನಾ ಮಾಡಲು ಯಾವ ಯಾವ ಸಾಲಗಳನ್ನು ಪರಿಗಣಿಸಲಾಗಿದೆ?

ಇ. ರೈತರು ಪಡೆದಿರುವ ಒಟ್ಟು ಸಾಲದ ಪ್ರಮಾಣ ಎಷ್ಟು?

ಈ. ಇದರ ಪ್ರಯೋಜನವು ರಾಜ್ಯದ ಎಷ್ಟು ರೈತರಿಗೆ ದೊರಕಲಿದೆ; ವಿವರ ನೀಡುವುದು;

ಉ. ಎಲ್ಲಿಯವರೆಗೆ ಈ ಮನ್ನಾ ಅವಧಿಯನ್ನು ನಿಗದಿಪಡಿಸಲಾಗಿದೆ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಹೌದು. ಮನ್ನಾ ಮಾಡಿರುವ ಬಡ್ಡಿಯ ಮೊತ್ತವು ರೂ. 127.00 ಕೋಟಿಗಳು.

ಆ. ಖಾರೀಫ್ 2002ರಲ್ಲಿ ದಿನಾಂಕ 01.03.2002 ರಿಂದ 30.09.2002 ರವರೆಗೆ ರೈತರಿಗೆ ವಿತರಿಸಲಾದ ಎಲ್ಲಾ ಬೆಳೆ ಸಾಲಗಳನ್ನು ಮಾತ್ರ ಪರಿಗಣಿಸಲಾಗಿದೆ.

ಇ. ಖಾರೀಫ್ 2002ರಲ್ಲಿ ರೈತರು ಪಡೆದಿರುವ ಅಲ್ಪಾವಧಿ ಬೆಳೆ ಸಾಲವು ಸುಮಾರು ರೂ. 975.00 ಕೋಟಿಗಳಾಗುತ್ತದೆ.

ಈ. ಈ ಯೋಜನೆಯ ಪ್ರಯೋಜನವನ್ನು ಸುಮಾರು 6.50 ಲಕ್ಷ ರೈತರು ಪಡೆಯಬಹುದೆಂಬ ಅಂದಾಜು ಮಾಡಲಾಗಿದೆ.

ಉ. ಈ ಅವಧಿಯು ಖಾರೀಫ್ 2002ರಲ್ಲಿ ವಿತರಿಸಲಾದ ಬೆಳೆ ಸಾಲಗಳ ಮರಪಾವತಿಗೆ ಆಯಾ ಜಿಲ್ಲಾ ಬ್ಯಾಂಕುಗಳು ನಿಗದಿಪಡಿಸಿರುವ ಸಾಲದ ವಾಯಿದೆಯ ದಿನಾಂಕಗಳವರೆಗೆ ಮಾತ್ರ ಅನ್ವಯವಾಗುತ್ತದೆ.

ಸಹಕಾರಿ ಸಂಸ್ಥೆಗಳ ಲೆಕ್ಕಾ ಪರಿಶೋಧನಾ ಕಾರ್ಯ ಹಿನ್ನೆಡೆ

1884(2285): ಶ್ರೀ ಸರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಹಕಾರಿ ಬ್ಯಾಂಕ್ ಹಾಗೂ ಸಂಘಗಳ ವಾರ್ಷಿಕ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸರ್ಕಾರದ ಲೆಕ್ಕಪರಿಶೋಧಕರ ಮೂಲಕ ತಪಾಸಣೆ ಮಾಡಿಸುವ ಪದ್ಧತಿಯನ್ನು ಕಡ್ಡಾಯಗೊಳಿಸಿದೆಯೇ? ಇದಕ್ಕೆ ಕಾರಣವೇನು?

ಆ. ಈ ಎಲ್ಲಾ ಸಂಸ್ಥೆಗಳ ಲೆಕ್ಕ ತಪಾಸಣೆ ಕಾರ್ಯಕ್ಕೆ ನಿಯೋಜಿಸಲು ಅಗತ್ಯವಿರುವ ಸಿಬ್ಬಂದಿ ಇಲಾಖೆ ಬಳಿ ಇರುವುದೇ

ಇ. ಇಲ್ಲದಿದ್ದಲ್ಲಿ, ಈ ಕಡ್ಡಾಯ ನಿಯಮವೇಕೆ? ಸರ್ಕಾರದ ವತಿಯಿಂದ ತಪಾಸಣೆಗೊಳಿಸಿದರೂ ಸಹ ವಿಧಿಸುವ ಶುಲ್ಕ ದುಬಾರಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಖಾಸಗಿ ಲೆಕ್ಕಪರಿಶೋಧಕರಿಂದ ಲೆಕ್ಕ ತಪಾಸಣೆ ಮಾಡಿಸಿದ್ದಲ್ಲಿ, ಆಗುವ ತೊಂದರೆಗಳೇನು? ಅವರಿಗೇಕೆ ಅವಕಾಶ ನೀಡುತ್ತಿಲ್ಲ?